ದಿನಾಂಕಃ 05-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು ಃ 1 ಮತ್ತು 3 ನೇ ಎದುರುದಾರ ಪರ ಶ್ರೀ.AGP ರವರಿಂದಃ**

1. ಸದರಿ ಆಸ್ತಿಯನ್ನು ಅಳತೆ ಮಾಡಿ ಅದರ ಬೆಲೆ ವರದಿ ನಿಗದಿಪಡಿಸಲು ನ್ಯಾಯಾಲಯದಿಂದ ಯಾವುದೇ ನೋಟಿಸ ಬಂದಿಲ್ಲ. ಸದರಿ ಬೆಲೆ ನಿಗದಿ ಮಾಡಲು ವಕೀಲರು ಕೇಳಿಕೊಂಡಿದ್ದರು. ಸದರಿ ಬೆಲೆ ನಿಗದಿ ವರದಿಯನ್ನು ನ್ಯಾಯಾಲಯಕ್ಕೆ ಹಾಜರಪಡಿಸಲು ಎಂದು ವಕೀಲರು ಹೇಳಿದ್ದರು. ಸರ್ಕಾರದವರು ಸದರಿ ಆಸ್ತಿಯ ಬೆಲೆ ನಿಗದಿ ಮಾಡಲು ಸೂಚನೆ ನೀಡಿಲ್ಲಾ. ಗೋಟೆ ಗ್ರಾಮದ ಸರ್ವೆ ನಂ.511/2 ರ ಬಾವಿಯ ಬೆಲೆ ನಿಗದಿ ಮಾಡಲು ನನಗೆ ಹೇಳಿದ್ದರು. ಸದರಿ ಜಮೀನಿನ ಮಾಲೀಕರು ನನಗೆ ಹೇಳಿರಲಿಲ್ಲ. ನಾನು ಜಮೀನಿನ ಮಾಲೀಕರ ಸಹಿ ಪಡೆದಿಲ್ಲ.

2. ಸದರಿ ಬಾವಿ ಎಷ್ಟು ವರ್ಷ ಹಳೆಯದು ಹೇಳಲು ಬರುವುದಿಲ್ಲ. ಸದರಿ ಬಾವಿ ಕಲ್ಲಿನಿಂದ ಕಟ್ಟಿದ್ದಾಗಿತ್ತು. ಸದರಿ ಬಾವಿಯ ನಕಾಶೆ ತೆಗೆದಿಲ್ಲ ಮತ್ತು ಫೋಟೊ ಸಹ ತೆಗೆದಿಲ್ಲ. ಸರ್ವೆ ನಂ.511/2 ರ ಅವಾರ್ಡ ಪ್ರತಿ ನೋಡಿಲ್ಲ. ನಾನು ಸ್ಥಳಕ್ಕೆ ಹೋಗಿಲ್ಲ ವಕೀಲರು ಹೇಳಿದ ಮೇರೆಗೆ ನಾನು ಬೆಲೆ ನಿಗದಿ ವರದಿ ನೀಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಸಹಿ/-
ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಜಮಖಂಡಿ